ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 11-07-1970.

*ಸಂಗಮಯುಗದ ಡಿಗ್ರಿ ಮತ್ತು ಭವಿಷ್ಯದ ಪ್ರಾಲಬ್ಧ* (संगमयुग की डिग्री और भविष्य की प्रालब्ध)

ಇಂದು ಬಾಪ್ ದಾದಾ ಎಲ್ಲಾ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ನಂತರ ಯಾವ ಡಿಗ್ರಿ ಪಡೆದುಕೊಂಡಿರುವರು ಎಂದು ನೋಡುತ್ತಿದ್ದಾರೆ. ಈ ವಿದ್ಯಾಭ್ಯಾಸಕ್ಕೆ ಯಾವ ಡಿಗ್ರಿ ಸಿಗುತ್ತದೆ? ಡಿಗ್ರಿ ಸಿಕ್ಕಿದೆಯೋ ಅಥವಾ ಸಿಗಬೇಕೋ? ವಿದ್ಯಾಭ್ಯಾಸದ ನಂತರ ಡಿಗ್ರಿ ಸಿಗುತ್ತದೆಯಲ್ಲವೇ? ಹಾಗಾದರೆ ಈ ಸಂಗಮದಲ್ಲಿ ತಮಗೆ ಏನು ಸಿಗುವುದು? ಸಂಪೂರ್ಣ ಫರಿಶ್ತಾ ಅಥವಾ ಅವ್ಯಕ್ತ ಪರಿಶ್ತಾ. ಈ ಡಿಗ್ರಿಯ ಮುಖ್ಯ ಅರ್ಹತೆಗಳು ಯಾವವು ಮತ್ತು ಎಲ್ಲಿಯವರೆಗೆ ಪ್ರತಿಯೋರ್ವ ವಿದ್ಯಾರ್ಥಿ ಇದರಲ್ಲಿ ಅರ್ಹರಾಗಿದ್ದಾರೆಂಬುದನ್ನು ನೋಡುತ್ತಿದ್ದಾರೆ. ಎಷ್ಟು ಅರ್ಹರೋ ಅಷ್ಟು ಬೇರೆಯವರನ್ನು ಯೋಗ್ಯ ಮಾಡುವರು. ಅರ್ಹರಾದವರೇ ಅನ್ಯರನ್ನು ಒಳ್ಳೆಯ ಗುಣಮಟ್ಟದವರನ್ನಾಗಿ ಮಾಡುವರು ಮತ್ತು ಅರ್ಹರಲ್ಲದವರು ಸಂಖ್ಯೆಯನ್ನು ಹೆಚ್ಚಿಸುವರು. ಆದ್ದರಿಂದ ಇಂದು ಎಲ್ಲರ ಗುಣಗಳನ್ನು ನೋಡುತ್ತಿದ್ದೇವೆ. ಯಾವ ಯಾವ ಗುಣಗಳಲ್ಲಿ ಅರ್ಹರು ಎಂಬುದನ್ನು ನೋಡಲಾಗುತ್ತದೆಯಲ್ಲವೇ? ಅದೇ ರೀತಿ ಇಲ್ಲಿಯೂ ಮುಖ್ಯ ಗುಣಗಳಲ್ಲಿ ಎಲ್ಲಿಯವರೆಗೆ ಜ್ಞಾನಪೂರ್ಣರಾಗಿದ್ದಾರೆ, ಇದರ ಜೊತೆಗೆ ವಿಶ್ವಾಸಪೂರ್ಣ, ಸಫಲತಾಪೂರ್ಣ, ಶಕ್ತಿಪೂರ್ಣ ಮತ್ತು ಸೇವಾಧಾರಿ ಆಗಿದ್ದಾರೆಯೇ ಎಂಬುದನ್ನು ನೋಡುತ್ತಿದ್ದೇವೆ. ಇಷ್ಟು ಗುಣಗಳು ಎಲ್ಲರಲ್ಲಿ ಒಂದು ವೇಳೆ ಬಂದರೆ ಆಗ ಡಿಗ್ರಿ ಸಿಗುವುದು. ಆದ್ದರಿಂದ ಈ ಗುಣಗಳಲ್ಲಿ ಯಾವ ಯಾವ ಗುಣಗಳು ಧಾರಣೆಯಾಗಿವೆ ಎಂಬುದನ್ನು ನೋಡಿಕೊಳ್ಳಬೇಕು. **ಜ್ಞಾನಪೂರ್ಣ ಎಂದರೆ ಬುದ್ಧಿಯಲ್ಲಿ ಪೂರ್ಣ ಜ್ಞಾನದ ಧಾರಣೆ, ಎಷ್ಟು ಜ್ಞಾನಪೂರ್ಣರಾಗಿರುವರೋ ಅವರು ಅಷ್ಟೇ ಸಫಲತಾಪೂರ್ಣರಾಗಿರುವರು.** ಸಫಲತೆ ಇಲ್ಲದಿದ್ದಾಗ ಜ್ಞಾನದ ಕೊರತೆ ಇದೆ ಎಂದು ತಿಳಿಯಬಹುದು. ಇದಕ್ಕೆ ಕಾರಣವೇನು? ವಿಶ್ವಾಸದಲ್ಲಿ ಪೂರ್ಣತೆಯಿಲ್ಲದಿರುವುದು. ವಿಶ್ವಾಸಪೂರ್ಣ ಎಂದರೆ ನಿಶ್ಚಯಬುದ್ಧಿ. ಒಂದು ತಮ್ಮಲ್ಲಿ ವಿಶ್ವಾಸ, ಎರಡನೆಯದಾಗಿ ಬಾಪ್ ದಾದಾರಲ್ಲಿ ಮತ್ತು ಮೂರನೆಯದಾಗಿ ಸರ್ವ ಪರಿವಾರದ ಆತ್ಮರಲ್ಲಿ ವಿಶ್ವಾಸ ಪಾತ್ರರಾಗಬೇಕಾಗುತ್ತದೆ. ಎಷ್ಟು ವಿಶ್ವಾಸಪೂರ್ಣರಾಗಿ, ನಿಶ್ಚಯಬುದ್ಧಿಯವರಾಗಿ ಯಾವುದೇ ಕರ್ತವ್ಯ ಮಾಡುವಿರೋ ಅಷ್ಟು ನಿಶ್ಚಯ ಬುದ್ಧಿಯ ವಿಜಯ ಎಂದರೆ ವಿಶ್ವಾಸಪೂರ್ಣರಾಗುವುದರಿಂದ ಸಫಲತಾಪೂರ್ಣರೂ ಆಗುತ್ತಾರೆ. ಅವರ ಪ್ರತಿಯೊಂದು ಕರ್ತವ್ಯ, ಸಂಕಲ್ಪ, ಮಾತು ಶಕ್ತಿಶಾಲಿಯಾಗಿರುವುದು. ಈ ರೀತಿ ಅರ್ಹತೆಯುಳ್ಳವರಿಗೆ ಈ ಡಿಗ್ರಿ ಪ್ರಾಪ್ತಿಯಾಗಲು ಸಾಧ್ಯ. ಒಂದು ವೇಳೆ ಡಿಗ್ರಿಯನ್ನು ಪಡೆದುಕೊಳ್ಳದಿದ್ದರೆ ಏನಾಗುತ್ತದೆ ಗೊತ್ತೇ? ಕೋರ್ಟ್ ನಿಂದ ನೋಟಿಸ್, ಸಿಕ್ಕರೆ ಡಿಗ್ರಿ ಸಿಗುವುದು ಇಲ್ಲವಾದರೆ ಡಿಕ್ಕಿ ಸಿಗುವುದು. ಧರ್ಮರಾಜಪುರಿಯಲ್ಲಿ ಸಿಲುಕುವ ಡಿಕ್ಕಿ (ನೋಟಿಸ್) ಸಿಗುವುದು.

ಆದ್ದರಿಂದ ಪುರುಷಾರ್ಥವನ್ನು ಮಾಡಿ ಡಿಗ್ರಿ ಪಡೆಯಬೇಕು. (ಡಿಕ್ಕಿ) ನೋಟೀಸ್ ಅಲ್ಲ. ಯಾರಿಗೆ ನೋಟಿಸ್ ಬರುವುದೋ ಅವರಿಗೆ ನಾಚಿಕೆಯಾಗುವುದು. ಆದ್ದರಿಂದ ಸದಾ ಎಷ್ಟು ಯೋಗ್ಯರಾಗಿದ್ದೇವೆ ಎಂಬುದನ್ನು ಪರೀಕ್ಷಿಸಿಕೊಳ್ಳಿ. ಮುಖ್ಯವಾದ ಅರ್ಹತೆ ಇದಾಗಿದೆ ಆದರೆ ಲಿಸ್ಟ್ ದೊಡ್ಡದಾಗಿದೆ. ಪ್ರತಿಯೊಂದು ಗುಣದ ಹಿಂದೆ "ಪೂರ್ಣ" ಶಬ್ದವೂ ಇದೆ. ವಿಶ್ವಾಸಪೂರ್ಣ, ಶಕ್ತಿಪೂರ್ಣ...... ಆದ್ದರಿಂದ ಈ ರೀತಿ ಎಲ್ಲಾ ಗುಣಗಳಲ್ಲಿ ಪೂರ್ಣರಾದರೆ ಡಿಗ್ರಿ ಸಿಗುವುದು, ಎಲ್ಲರೂ ಸಫಲರಾಗುತ್ತಾರೆ ಆದರೆ ಸಫಲತಾಪೂರ್ಣರೋ, ಶಕ್ತಿಪೂರ್ಣರೋ ಅಥವಾ ಕಡಿಮೆಯೋ ಎಂಬುದನ್ನು ನೋಡಬೇಕು. ಯಾರು ಈ ಎಲ್ಲಾ ಗುಣಗಳಲ್ಲಿ ಪೂರ್ಣರಾಗುವರೋ ಅವರಿಗೆ ಸಂಪೂರ್ಣ ಅವ್ಯಕ್ತ ಫರಿಶ್ತೆಯ ಡಿಗ್ರಿ ಸಿಗುವುದು, ಎಲ್ಲರೂ ಇದೇ ಗುರಿಯನ್ನು ಇಟ್ಟುಕೊಂಡಿರುವಿರಲ್ಲವೇ? ಈಗ ವರ್ತಮಾನ ಸಮಯ ಯಾವುದಾಗಿದೆ? ಈಗ ಬಹಳ ನಾಜೂಕು ಸಮಯವಾಗಿದೆ. ಈಗ ವೈಯ್ಯಾರದಿಂದ ನಡೆಯುವ ಸಮಯವಲ್ಲ. ಆ ವೈಯ್ಯಾರ ಬಾಲ್ಯದ್ದಾಗಿತ್ತು. ನಾಜೂಕು ಸಮಯದಲ್ಲಿಯೂ ವೈಯ್ಯಾರ ಮಾಡಿದರೆ ಫಲಿತಾಂಶದಲ್ಲಿ ಹಾನಿಯೇ ಆಗುವುದು. ಆದ್ದರಿಂದ ಈಗ ಸಂಹಾರಿಮೂರ್ತಿ ಆಗಬೇಕು. ವಿಕರಾಳ ರೂಪಧಾರಿಯಾಗಬೇಕು. ಈಗ ದಿನದಿನಕ್ಕೆ ನಾಜೂಕು

ಸಮಯವಾಗುವುದರಿಂದ ಸಂಹಾರ ಮೂರ್ತಿಯಾಗಬೇಕು. ಯಾರ ಸಂಹಾರ? ತಮ್ಮ ಸಂಸ್ಕಾರಗಳ, ತಮ್ಮ ವಿಕರ್ಮಗಳ ಮೇಲೆ ಮತ್ತು ಈ ಸಮಯದಲ್ಲಿರುವ ವಿಕರ್ಮಿ ಆತ್ಮರ ಮೇಲೆ ಈಗ ವಿಕರಾಳ ರೂಪಧಾರಣೆ ಮಾಡಿ ಒಂದು ಕ್ಷಣದಲ್ಲಿ ಭಸ್ಮ ಮಾಡಬೇಕು. ಒಂದು ಕ್ಷಣದಲ್ಲಿ ಕಣ್ಣು ತೆಗೆದರು. ಮತ್ತು ವಿನಾಶವಾಯಿತು ಎಂದು ಶಂಕರನಿಗೆ ಹೇಳುತ್ತಾರಲ್ಲವೇ? ಇದು ಸಂಹಾರಿಮೂರ್ತಿಯ ಕರ್ತವ್ಯದ ಚಿಹ್ನೆಯಾಗಿದೆ. ಯಾರ ಮೇಲೆಯಾದರೂ ವಿಕರಾಳ ರೂಪದಿಂದ ದೃಷ್ಟಿ ಹಾಕಿದಾಗ ಅವರ ವಿಕರ್ಮಿ ಸಂಸ್ಕಾರಗಳು ಭಸ್ಮವಾಗಬೇಕು. ಹಾಗಾದರೆ ವಿಕರ್ಮಗಳು ಮತ್ತು ವ್ಯರ್ಥ ಕರ್ಮಗಳು, ವಿಕರ್ಮಿಗಳ ಮೇಲೆ ಈಗ ವಿಕರಾಳ ರೂಪ ಧಾರಣೆ ಮಾಡಬೇಕು. ಈಗ ಸ್ನೇಹಿಮೂರ್ತಿಯೂ ಅಲ್ಲ, ಈಗ ಕಾಳಿ ರೂಪವಾಗಬೇಕು. ವಿಕರಾಳ ಸಂಹಾರಿ ರೂಪ ಬೇಕು. ಈಗ ಅಂತಿಮ ಸಮಯವಾಗಿದೆ. ಇಲ್ಲಿಯವರೆಗೂ ವಿಕರಾಳ ರೂಪಧಾರಿಯಾಗದಿದ್ದರೆ ತಮ್ಮ ವಿಕರ್ಮ ಮತ್ತು ವಿಕರ್ಮಿಯರನ್ನು ಎದುರಿಸಲಾರಿರಿ. ಈಗ ಸಮಾವೇಶಗೊಳಿಸಿಕೊಳ್ಳುವ ಮಾತಿಲ್ಲ. ವಿಕರ್ಮಗಳನ್ನು, ವ್ಯರ್ಥ ವಿಕರ್ಮಿ ವ್ಯವಹಾರವನ್ನು ಈಗ ಸಮಾವೇಶಗೊಳಿಸಿಕೊಳ್ಳುವುದಲ್ಲ ಆದರೆ ಸಂಹಾರ ಮಾಡಬೇಕು. ಈಗ ಸ್ನೇಹವನ್ನು ಸಮಾವೇಶಗೊಳಿಸಿಕೊಳ್ಳಬೇಕು. ಶಕ್ತಿರೂಪವನ್ನು ಪ್ರತ್ಯಕ್ಷ ಮಾಡಬೇಕು. ಶಕ್ತಿಯರಿಗೆ ಒಂದೇ ಸಮಯದಲ್ಲಿ ಮೂರು ಮಾತುಗಳನ್ನು ಧಾರಣೆ ಮಾಡಬೇಕಾಗುತ್ತದೆ. ಒಂದು ಮಸ್ತಕದಲ್ಲಿ ತಾಯಿಯ ಸ್ನೇಹದ ಗುಣ, ರೂಪದಲ್ಲಿ ಆತ್ಮೀಯತೆ ಮತ್ತು ವಾಣಿಯಲ್ಲಿ ವಜ್ರ ಒಂದೊಂದು ಮಾತು ವಿಕರ್ಮ ಮತ್ತು ವಿಕರ್ಮಿಗಳನ್ನು ನಾಶ ಮಾಡುವಂತಹವಾಗಬೇಕು. ಈ ಮೂರೂ ಮಾತುಗಳನ್ನು ಒಟ್ಟಿಗೆ ಧಾರಣೆ ಮಾಡಿದಾಗ ಏನಾಗುವುದು? ವಿಕರ್ಮ ಮತ್ತು ವಿಕರ್ಮಿ ಭಸ್ಮವಾಗುವರು. ಶಕ್ತಿಯರ ದೃಷ್ಟಿಯಿಂದ ವಿಕರ್ಮಿ ಆತ್ಮರು ನಡುಗುತ್ತಾರೆ. ಯಾವುದರಿಂದ ತಮ್ಮ ವಿಕರ್ಮಗಳಿಂದ. ಆದ್ದರಿಂದ ಈಗ ಸಂಹಾರಿಯಾಗಿ ಬೇಗನೆ ಸಂಹಾರ ಮಾಡಿ. ಕೆಲವೆಡೆ ಶೃಂಗಾರ ಮಾಡುತ್ತಾ ಸಂಹಾರವನ್ನು ಮರೆತು ಬಿಡುತ್ತೀರಿ. ಶೃಂಗಾರ ಬಹಳವಾಯಿತು ಈಗ ಸಂಹಾರ ಮಾಡಿ, ಮಾಸ್ಟರ್ ಬ್ರಹ್ಮನೂ ಆದಿರಿ, ಪಾಲನೆ, ಶೃಂಗಾರ ಮಾಡಿದಿರಿ ಆದರೆ ಈಗ ಸಂಹಾರದ ಪಾತ್ರವಾಗಿದೆ. ಶಕ್ತಿಯರ ಅಲಂಕಾರ, ಶಕ್ತಿಯರ ಗರ್ಜನೆ ಮತ್ತು ಯಾವ ಕಾರ್ಯಕ್ಕಾಗಿ ಶಕ್ತಿಯರ ಗಾಯನವಿರುವುದು? ಗೆಜ್ಜೆಗಳ ಝೇಂಕಾರಕ್ಕೆ, ಗೆಜ್ಜೆಗಳನ್ನು ಕಟ್ಟಿ ಅಸುರರ ಮೇಲೆ ನೃತ್ಯ ಮಾಡಬೇಕು. ನೃತ್ಯ ಮಾಡುವುದರಿಂದ ಏನಾಗುತ್ತದೆ? ಕೆಳಗಡೆ ಇರುವ ವಸ್ತು ಒತ್ತಲ್ಪಟ್ಟು ನಾಶವಾಗುವುದು. ನಿರ್ಭಯತೆ ಮತ್ತು ವಿನಾಶದ ಚಿಹ್ನೆ ಈ ಗೆಜ್ಜೆಗಳ ಝೇಂಕಾರವಾಗಿದೆ. ಪಾಂಡವರು ಮಾಡಿಲ್ಲ ಎಂದಲ್ಲ. ಪಾಂಡವರು ಸಹ ಶಕ್ತಿ ರೂಪವಾಗಿದ್ದಾರೆ. ಶಕ್ತಿರೂಪದಲ್ಲಿ ಇಬ್ಬರೂ ಬರುತ್ತಾರೆ. ಹಾಗಾದರೆ ಈ ಮೂರೂ ಕರ್ತವ್ಯ ಪ್ರಾಯೋಗಿಕ ಮತ್ತು ಪ್ರತ್ಯಕ್ಷ ರೂಪದಲ್ಲಿ ನಡೆಯುತ್ತಿವೆ. ಈಗ ದುರ್ಬಲರ ಕೆಲಸವಲ್ಲ. ಮೈದಾನದಲ್ಲಿ ದುರ್ಬಲರು ಬರುವುದಿಲ್ಲ. ಶೂರವೀರರು ಬರುತ್ತಾರೆ. ಆದ್ದರಿಂದ ಈಗ ಮೈದಾನದಲ್ಲಿ ಪ್ರತ್ಯಕ್ಷವಾಗುವ ಸಮಯವಾಗಿದೆ. ಶೂರವೀರ ಶಕ್ತಿರೂಪರಾಗಿ ಪ್ರತ್ಯಕ್ಷ ರೂಪದಲ್ಲಿ ಮುಂದೆ ಬನ್ನಿ. ಈ ರೂಪದಲ್ಲಿ ಪ್ರತ್ಯಕ್ಷವಾದಾಗ ಏನಾಗುವುದು? ಪ್ರತ್ಯಕ್ಷತೆ. ತಂದೆ ಮತ್ತು ಮಕ್ಕಳ ಪ್ರತ್ಯಕ್ಷತೆಯಾಗುವುದು. ಎಷ್ಟು ಪ್ರತ್ಯಕ್ಷರಾಗುವಿರೋ ಅಷ್ಟು ಪ್ರತ್ಯಕ್ಷತೆಯಾಗುವುದು. ಆದ್ದರಿಂದ ತಂದೆಯನ್ನು ಪ್ರಖ್ಯಾತ ಮಾಡಲು ಪ್ರತ್ಯಕ್ಷರಾಗಬೇಕು. ಇನ್ನೂ ತಮ್ಮ ದುರ್ಬಲತೆಗಳಿಗೆ ವಿದಾಯ ಕೊಡದಿದ್ದರೆ ಸೃಷ್ಟಿಯ ಕಲ್ಯಾಣಕ್ಕಾಗಿ ಹೇಗೆ ನಿಮಿತ್ತರಾಗುವಿರಿ? ಆದ್ದರಿಂದ ತಮ್ಮ ದುರ್ಬಲತೆಗಳಿಗೆ ಈಗಲೇ ವಿದಾಯವನ್ನು ಕೊಡಿ ಆಗ ಸೃಷ್ಟಿಯ ಕಲ್ಯಾಣಕಾರಿ ಆಗಬಲ್ಲಿರಿ.

**ಪಾರ್ಟಿಗಳ ಜೊತೆಗೆ :-**

1. ವರ್ತಮಾನ ಸಮಯ ಎಲ್ಲರೂ ಯಾವ ವಿಶೇಷ ಪುರುಷಾರ್ಥ ಮಾಡುತ್ತಿರುವಿರಿ? ಸಂದೇಶ ಕೊಡುವುದು ಸಾಧಾರಣ ಮಾತಾಗಿದೆ. ವಿಶೇಷ ಆತ್ಮರಾಗಲು ವಿಶೇಷ ಕಾರ್ಯವನ್ನೂ ಮಾಡಬೇಕು. ಇತ್ತೀಚೆಗೆ ಜಗತ್ತಿನ ವಿಶೇಷ ಆತ್ಮರ ಮೇಲೆ ವಿಶೇಷ ಗಮನವಿದೆ. ಒಂದು ವಿಶೇಷ ಆತ್ಮನ ಮೇಲೆ ಗಮನವಿಡುವುದರಿಂದ ಅನೇಕರ ಗಮನ ಸ್ವತಃ ಸೆಳೆಯಲ್ಪಡುತ್ತದೆ. ವಿಶೇಷ ಆತ್ಮದ ಮೇಲೆ ಗಮನ

ಕೊಡುವುದರಿಂದ ಅವರು ವಿಶೇಷವಾಗುವುದಿಲ್ಲ, ನೀವು ವಿಶೇಷವಾಗುವಿರಿ, ವಿಶೇಷ ಗಮನ ಕೊಡುವುದರಿಂದ ಯಾವುದೇ ವ್ಯರ್ಥ ಸಂಕಲ್ಪ, ಕರ್ಮ ಅಥವಾ ಸಮಯ ಹೋಗುವುದಿಲ್ಲ. ಶಕ್ತಿ ಜಮಾ ಆದರೆ ವಿಶೇಷ ಸೇವೆಯನ್ನೂ ಸಹಜವಾಗಿ ಮಾಡಬಹುದು. ಆದ್ದರಿಂದ ಈಗ ಹಳೆಯ ಲೆಕ್ಕಾಚಾರದ ಫೈಲ್ ಸಮಾಪ್ತಿ ಮಾಡಿ ಹೊಸ ಫೈಲ್ ಮಾಡಬೇಕು. ಯಾರು ಎಷ್ಟು ಅರ್ಹರೋ ಅಷ್ಟು ಅವರ ಬೆಲೆಯಿರುವುದು. ಬೆಲೆ ಬಾಳುವಂತಹ ವಸ್ತುವನ್ನು ಎಂದೂ ಸಾಧಾರಣ ಸ್ಥಾನದಲ್ಲಿ ಇಡುವುದಿಲ್ಲ. ಅದಕ್ಕೆ ವಿಶೇಷ ಸ್ಥಾನವನ್ನು ಕೊಡಲಾಗುತ್ತದೆ. ಹಾಗಾದರೆ ಅರ್ಹತೆಗಳನ್ನು ಮುಂದಿಟ್ಟುಕೊಂಡು ನಂತರ ಎಷ್ಟು ಪ್ರತಿಶತ ಆಗಿರುವಿರಿ ಎಂದು ಬರೆದುಕೊಳ್ಳಿ. ಯಾವಾಗ 100ಕ್ಕೆ 100 ಪ್ರತಿಶತವಾಗುವಿರೋ ಆಗ ಈ ಸಾಧು-ಸಂತರೂ ಬಾಗುವರು ಮತ್ತು ಅವರ ಬಾಗುವಿಕೆಯಿಂದ ಆ ಝೇಂಕಾರದ ಧ್ವನಿ ದೂರ ದೂರದವರೆಗೆ ಎಲ್ಲರ ಕಿವಿಗಳನ್ನು ತಲುಪುವುದು. ಅಲ್ಲಿಯೇ ಪುರುಷಾರ್ಥ ಮತ್ತು ಅಲ್ಲಿಯೇ ಪ್ರಾಪ್ತಿ ಇದೇ ಯಥಾರ್ಥ ಪುರುಷಾರ್ಥದ ಅರ್ಥವಾಗಿದೆ. ಈ ಸಂಗಮಯುಗಕ್ಕೆ ಪ್ರತ್ಯಕ್ಷ ಫಲ ಪಡೆಯುವ ವಿಶೇಷ ವರದಾನವಿದೆ. ಕಡಿಮೆ ಪುರುಷಾರ್ಥಕ್ಕೆ ಹೆಚ್ಚು ಪ್ರಾಲಬ್ಧ ಪಡೆಯುವಂತಹ ಫಲವಾಗಿದೆ. ಆದ್ದರಿಂದ ಸಮಯದ ವಿಶೇಷತೆಯನ್ನು ತಿಳಿದು ತಮ್ಮಲ್ಲಿ ವಿಶೇಷತೆಯನ್ನು ತುಂಬಿಕೊಳ್ಳಬೇಕು. ಕೊರತೆ ಉಳಿದರೆ ಅದರ ಲಕ್ಷಣವೇನಾಗಿದೆ? ಬಿಲ್ಲು-ಬಾಣ. ಅದ್ಭುತವನ್ನು ಮಾಡದಿದ್ದರೆ ಬಿಲ್ಲು-ಬಾಣ ಸಿಗುವುದು. ಒಂದು ಕ್ಷಣದ ಫಲವನ್ನು ಸಹ ಪಡೆಯದಿದ್ದರೆ ಪೂರ್ಣರಾಗುವುದಿಲ್ಲ. ಫೇಲ್ ನ ಸಾಲಿನಲ್ಲಿ ಬರುವಿರಿ.

2. ದಿಲ್ಲಿಯನ್ನು ಬಾಪ್ ದಾದಾರ ಹೃದಯವೆಂದು ಹೇಳುತ್ತಾರೆ. ಹೃದಯದ ಬಡಿತದಿಂದ ಹೇಗೆ ಆರೋಗ್ಯದ ಬಗೆಗೆ ಗೊತ್ತಾಗುವುದೋ ಹಾಗೆ ದಿಲ್ಲಿಯ ಸ್ವರದಿಂದ ಸಮಾಪ್ತಿಯ ಶಬ್ದ ಕೇಳಿ ಬರುವುದು, ದಿಲ್ಲಿಯಾಗಿದೆ ಕನ್ನಡಿ, ದಿಲ್ಲಿಯವರ ಜವಾಬ್ದಾರಿ ಎಷ್ಟಾಗಿದೆ ನೋಡಿ. ಎಷ್ಟು ದೊಡ್ಡ ಜವಾಬ್ದಾರಿಯ ಕಿರೀಟವೋ ಅಷ್ಟು ಸತ್ಯಯುಗದಲ್ಲಿ ದೊಡ್ಡ ಕಿರೀಟ ಸಿಗುವುದು. ಇದನ್ನೇ ಬೇಹದ್ದಿನ ಜವಾಬ್ದಾರಿಯೆಂದು ಹೇಳಲಾಗುತ್ತದೆ. ತಂದೆಯೂ ಮಧುಬನದಲ್ಲಿರುತ್ತಾ ಬೇಹದ್ದಿನ ಸೇವೆಯನ್ನು ಮಾಡುತ್ತಿದ್ದರಲ್ಲವೇ? ಆದ್ದರಿಂದ ಒಬ್ಬೊಬ್ಬರಿಗೂ ಬೇಹದ್ದಿನ ಜವಾಬ್ದಾರಿಯಿದೆ. ಬೇಹದ್ದಿನ ಬುದ್ಧಿ ಹೇಗಿರುತ್ತದೆ? ಬೇಹದ್ದಿನ ಮಾತುಗಳ ಬಗೆಗೆ ಯೋಚಿಸುವುದು, ಬೇಹದ್ದಿನ ಪರಿವಾರದ ಸಂಬಂಧ ಮತ್ತು ಸ್ನೇಹ, ಸರ್ವ ಸ್ಥಾನಗಳು ನಮ್ಮವೇ.... ಈ ರೀತಿ ಇರುವವರಿಗೆ ಬೇಹದ್ದಿನ ಸೇವಾಧಾರಿ ಎಂದು ಕರೆಯಲಾಗುತ್ತದೆ. ಹದ್ದಿನ ಸೇವೆ ಮಾಡುವವರನ್ನಲ್ಲ.

3. ಮಧುಬನವನ್ನು ತಿಜೋರಿಯೆಂದು ಕರೆಯಲಾಗುತ್ತದೆ. ಮಧುಬನ ನಿವಾಸಿಗಳು ತಿಜೋರಿಯಲ್ಲಿರುವಿರಿ. ತಿಜೋರಿಯಲ್ಲಿರುವ ಎಂತಹ ಮಣಿಯಾಗಿದ್ದೀರಿ? ಎಲ್ಲಕ್ಕಿಂತ ಉತ್ತಮ ಮಣಿಯಾಗಿದೆ ಮಸ್ತಕಮಣಿ, ಮಸ್ತಕಮಣಿ ಕಡಿಮೆಯಿರುತ್ತಾರೆ, ಹೃದಯಮಣಿ ಜಾಸ್ತಿಯಿರುತ್ತಾರೆ. ಯಾರು ಹೆಚ್ಚು ತಿಜೋರಿಯಲ್ಲಿರುತ್ತಾರೋ ಅವರು ಮಸ್ತಕಮಣಿ ಆಗಿದ್ದಾರೆ. ಯೋಗಯುಕ್ತ ಮತ್ತು ನಿಶ್ಚಯಬುದ್ಧಿಯಾಗಿ ಕರ್ತವ್ಯ ಮಾಡುವುದರಿಂದ ಸಫಲತೆ ಸಿಕ್ಕೇ ಸಿಗುತ್ತದೆ. ಮೊದಲೇ ಮಾಡುತ್ತೇವೆ ಆದರೆ ಸಿಗುವುದು ಕಷ್ಟವೆಂಬ ಸಂಕಲ್ಪ ಬುದ್ಧಿಯಲ್ಲಿರುತ್ತದೆ. ಆದ್ದರಿಂದ ಈ ಸಂಕಲ್ಪವೂ ಪ್ರತಿಶತ ನಿಶ್ಚಯವನ್ನು ಕಡಿಮೆ ಮಾಡುತ್ತದೆ. ನಿಶ್ಚಯಬುದ್ಧಿಯಾಗಿ ಮಾಡಿದರೆ ಫೇಲ್ ಆಗುವುದಿಲ್ಲ. ಸಮಸ್ಯೆಗಳನ್ನು ಎದುರಿಸುವುದರಿಂದ ಸಫಲತೆ ಸಿಗುತ್ತದೆ. ವಿಘ್ನಗಳು ಬರುತ್ತವೆ ಆದರೆ ನೆನಪಿನ ಅಗ್ನಿಯಿಂದ ವಿಘ್ನಗಳು ಭಸ್ಮವಾಗುತ್ತವೆ.

ಅವ್ಯಕ್ತ ಮುರಳಿ 11-07-1979.

*<u>ಸಂಗಮಯುಗದ ಡಿಗ್ರಿ ಮತ್ತು ಭವಿಷ್ಯದ ಪ್ರಾಲಬ್ಧ</u>*

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಂಪೂರ್ಣ ಫರಿಶ್ತೆಯಾಗಿ ಸಂಗಮ ಯುಗದ ಡಿಗ್ರಿಯನ್ನು ಪಡೆದಿದ್ದೇನೆ.

2. ನಾನು ಯೋಗ್ಯವಾಗಿ ತಯಾರಾಗಿ, ಗುಣಮಟ್ಟದವರನ್ನು ತಯಾರು ಮಾಡಿದ್ದೇನೆ.

3. ನಾನು ಬುದ್ಧಿಯಲ್ಲಿ ಜ್ಞಾನದ ಧಾರಣೆಯನ್ನು ಮಾಡಿ ಜ್ಞಾನಸ್ವರೂಪವಾಗಿರುವ ಸಫಲತಾ ಮೂರ್ತಿ.

4. ನಾನು ಸ್ವಯಂನ, ಬಾಪ್ ದಾದಾ ರವರ, ಪರಿವಾರದ ವಿಶ್ವಾಸಕ್ಕೆ ಪಾತ್ರನಾಗಿ ಕರ್ತವ್ಯವನ್ನು ನಿರ್ವಹಿಸಿರುವ 'ನಿಶ್ಚಯ ಬುದ್ಧಿ ವಿಜಯಂತಿ' ಸ್ವರೂಪ.

5. ನಾನು ಜ್ಞಾನಪೂರ್ಣ, ವಿಶ್ವಾಸ ಪೂರ್ಣ, ಸಫಲತಾ ಪೂರ್ಣ, ಶಕ್ತಿಪೂರ್ಣ ಮತ್ತು ಸೇವಾಧಾರಿ - ಈ ಎಲ್ಲಾ ಗುಣಗಳಲ್ಲಿ ಸಂಪೂರ್ಣವಾಗಿ, "ಸಂಪೂರ್ಣ ಅವ್ಯಕ್ತ ಫರಿಶ್ತಾ" ಎಂಬ ಡಿಗ್ರಿಯನ್ನು ಪಡೆದಿದ್ದೇನೆ.

6. ನಾನು ವಿಕರ್ಮಗಳ ಮೇಲೆ ವಿರಾಟ ರೂಪವನ್ನು ಧಾರಣೆ ಮಾಡಿ ಒಂದು ಕ್ಷಣದಲ್ಲಿ ಭಸ್ಮ ಮಾಡಿರುವ ಸಂಹಾರ ಮೂರ್ತಿ.

7. ನಾನು ಸದಾ ಮಸ್ತಕದಲ್ಲಿ ಸ್ನೇಹಗುಣ, ಆತ್ಮೀಯತೆ ಮತ್ತು ವಾಣಿಯಲ್ಲಿ ಗಟ್ಟಿತನದಿಂದ ವಿಕರ್ಮಗಳನ್ನು, ನನ್ನ ಶಕ್ತಿಯ ದೃಷ್ಟಿಯಿಂದ ವಿಕರ್ಮಿಗಳನ್ನು ಸಮಾಪ್ತಿ ಮಾಡಿದ್ದೇನೆ.

8. ನಾನು ಪಾಲನೆ ಮಾಡಿ, ಅಲಂಕಾರ ಮಾಡಿಕೊಂಡು ಈಗ ಸಂಹರಿಸುವ ಪಾತ್ರವನ್ನು ಅಭಿನಯಿಸುವ ಮಾಸ್ಟರ್ ಬ್ರಹ್ಮನು.

9. ನಾನು ಸಿಂಹ ಘರ್ಜನೆಯನ್ನು ಮಾಡಿ ಅಸುರೀ ಗುಣಗಳ ಮೇಲೆ ನಾಟ್ಯ ಮಾಡುವ ಧೈರ್ಯ ಸ್ವರೂಪ.

10. ನಾನು ಶಕ್ತಿ ರೂಪವನ್ನು ಧರಿಸಿ ಪ್ರತ್ಯಕ್ಷ ರೂಪದಲ್ಲಿ ತಂದೆಯನ್ನು ಪ್ರಖ್ಯಾತಿ ಮಾಡಿದ್ದೇನೆ.

11. ನಾನು ನನ್ನ ದುರ್ಬಲತೆಗಳಿಗೆ ವಿದಾಯವನ್ನು ಕೊಟ್ಟಿರುವ ವಿಜಯಶಾಲಿ.